02K(A)

KANNADA, Paper - II

(First Language)

Parts A and B

Time : 2 Hours 45 min.] **[Maximum Marks : 40**

ಸೂಚನೆಗಳು :

1. **Part-A** ಪ್ರಶ್ನೆಗಳಿಗೆ ಉತ್ತರ ಪತ್ರಿಕೆಯಲ್ಲಿಯೇ ಉತ್ತರಗಳನ್ನು ಬರೆಯಬೇಕು.
2. ಮೊದಲ **15** ನಿಮಿಷಗಳು ಪ್ರಶ್ನೆಪತ್ರಿಕೆ ಓದುವುದಕ್ಕೆ ವಿನಿಯೋಗಿಸಬೇಕು.
3. **Part-B** ಪ್ರಶ್ನೆಗಳಿಗೆ ಪ್ರಶ್ನೆ ಪತ್ರಿಕೆಯಲ್ಲಿಯೇ ಉತ್ತರ ಬರೆದು ಅದನ್ನು **Part-A** ಉತ್ತರಪತ್ರಿಕೆಗೆ ಜೋಡಿಸಬೇಕು.
4. ಪ್ರತಿ ಪ್ರಶ್ನೆಗೆ ಕೇಳಿದ ವಿಧವಾಗಿ ಉತ್ತರ ಬರೆಯಬೇಕು. ಅಂತರ್ಗತ ಆಯ್ಕೆ ವ್ಯಾಸರೂಪ ಪ್ರಶ್ನೆಗಳಿಗೆ ಮಾತ್ರವೇ ಎಂದು ಗಮನಿಸಬೇಕು.

Part-A

Time : 2 hours ***Marks : 30***

I. ಅವಗಾಹನೆ – ಪ್ರತಿಸ್ಪಂದನೆ (12 ಅಂಕಗಳು) **1 × 4=4**

1. ಈ ಕೆಳಗಿನ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ :

ಅ) ರಾಯ ರಾಯರಿಗೆಲ್ಲ ತಾನೇ ಪ್ರಚಂಡ

ಆ) ಮೈಯೊಳಗೆ ನವಗಾಯ ಒಂಬತ್ತು ತುಂಡ

ಇ) ಒಯ್ಯನೊಯ್ಯನೇ ಬಂದು ಹೆಗಲೇರಿಕೊಂಡ

ಈ) ಕೈಯುಂಟು ಕಾಲಿಲ್ಲ ಶಿರಹರಿದ ಮುಂಡ

2. ಈ ಕೆಳಗಿನ ಪದ್ಯ ಓದಿ ಪ್ರಶ್ನೆಗಳಿಗೆ ಉತ್ತರಿಸಿ : **1 × 4 = 4**

ಭಾಗ್ಯದ ಬಳೆಗಾರ ಹೋಗಿ ಬಾ ನನ್ನವರಿಗೆ
ಅಚ್ಚ ಕೆಂಪಿನ ಬಳೆ ಹಸಿರು ಗೀರಿನ ಬಳೆ
ಎನ್ನ ಹಡೆದವ್ವಗೆ ಬಲು ಆಸೆ ಬಳೆಗಾರ
ಕೊಂಡೋಗ್ಗೊ ಎನ್ನ ತವರಿಗೆ ।
ಭಾಗ್ಯದ ಬಳೆಗಾರ ಹೋಗಿ ಬಾ ನನ್ನವರಿಗೆ

– ಜನಪದಗೀತೆ

ಪ್ರಶ್ನೆಗಳು :

ಅ) ಬಳೆಗಾರ ಎಲ್ಲಿಗೆ ಹೋಗಿ ಬರಬೇಕೆಂದು ಹೆಣ್ಣು ಹೇಳುತ್ತಾಳೆ ?

ಆ) ಹಡೆದವ್ವನಿಗೆ ಯಾವ ಬಣ್ಣದ ಬಳೆ ಎಂದರೆ ಆಸೆ ?

ಇ) ತವರು ಎಂಬುದರ ಅರ್ಥವೇನು ?

ಈ) ಇದು ಎಂತಹ ಗೀತೆಯಾಗಿದೆ ?

3. ಈ ಭಾಗವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $4 \times \frac{1}{2} = 2$

ಶಲ್ಯ ಮದ್ರದೇಶದ ರಾಜನಾಗಿದ್ದ, ಆ ದೇಶದ ಪದ್ಧತಿಯಂತೆ ಆತನ ತಂಗಿಗೆ ಮಾದ್ರಿ ಎನ್ನುವ ಹೆಸರು ಬಂತು. ಮಾದ್ರಿಯನ್ನು ಪಾಂಡು ಮದುವೆಯಾದ. ಹೀಗಾಗಿ ಶಲ್ಯ ನಕುಲ ಸಹದೇವರಿಗೆ ಸೋದರಮಾವ. ಉಳಿದ ಪಾಂಡವರಿಗೂ ಮಾವ. ಕುರುಕ್ಷೇತ್ರ ಯುದ್ಧ ಶುರುವಾದಾಗ ಶಲ್ಯ ಪಾಂಡವರಿಗೆ ನೆರವಾಗುವುದಕ್ಕೆ ತನ್ನ ಅಗಾಧವಾದ ಸೇನೆಯನ್ನು ತೆಗೆದುಕೊಂಡು ಉಪಪ್ಲವ್ಯ ಎಂಬ ಪಟ್ಟಣದತ್ತ ಹೊರಡುತ್ತಾನೆ. ಶಲ್ಯ ಪಾಂಡವರಿಗೆ ಸಹಾಯ ಮಾಡುವ ಸಂಗತಿ ದುರ್ಯೋಧನನಿಗೆ ತಿಳಿಯುತ್ತದೆ.

ಪ್ರಶ್ನೆಗಳು :

ಅ) ಮದ್ರ ದೇಶದ ರಾಜ ಯಾರು ?

ಆ) ನಕುಲ ಸಹದೇವರ ತಂದೆ ತಾಯಿ ಯಾರು ?

ಇ) ಅಗಾಧವಾದ ಸೇನೆಯನ್ನು ತೆಗೆದುಕೊಂಡು ಉಪಪ್ಲವ್ಯ ಪಟ್ಟಣಕ್ಕೆ ಶಲ್ಯ ಏಕೆ ಹೊರಡುತ್ತಾನೆ ?

ಈ) ದುರ್ಯೋಧನನಿಗೆ ತಿಳಿದ ಸಂಗತಿ ಏನು ?

4. ಈ ಕೆಳಗಿನ ನಾಟಕವನ್ನು ಓದಿ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ. $4 \times \frac{1}{2} = 2$

ಅಭಿಮನ್ಯು : ದೊಡ್ಡಪ್ಪ ನೀವೇಕೆ ಇಂದು ಬಹಳ ಚಿಂತಾಕ್ರಾಂತರಾಗಿರುವಿರಿ ?

ಧರ್ಮರಾಯ : ಬಾ ಮಗು ಅಭಿಮನ್ಯು. ಇಂದು ದ್ರೋಣಾಚಾರ್ಯರು ಯುದ್ಧಭೂಮಿಯಲ್ಲಿ ಚಕ್ರವ್ಯೂಹವನ್ನು ರಚಿಸಿದ್ದಾರೆ. ಇದನ್ನು ಭೇದಿಸುವ ವಿದ್ಯೆ ನಿನ್ನ ತಂದೆಯಾದ ಅರ್ಜುನ, ಶ್ರೀಕೃಷ್ಣ ಹಾಗೂ ಬಲರಾಮರಿಗೆ ಮಾತ್ರ ಗೊತ್ತು. ಆದರೆ ಈಗ ಅವರು ಅನಿವಾರ್ಯವಾಗಿ ಸಂಶಪ್ತಕರೆಂಬ ರಾಕ್ಷಸರನ್ನು ಎದುರಿಸಲು ಹೋಗಿದ್ದಾರೆ. ಈಗೇನು ಮಾಡಬೇಕು ಎಂಬುದೇ ದೊಡ್ಡ ಚಿಂತೆಯಾಗಿದೆ.

ಅಭಿಮನ್ಯು : ದೊಡ್ಡಪ್ಪ, ಇಷ್ಟು ಚಿಕ್ಕ ವಿಷಯಕ್ಕೆ ಅಷ್ಟೊಂದು ಚಿಂತೆಯೇ ?

ಧರ್ಮರಾಯ : ಏನು ! ಇದು ಚಿಕ್ಕ ವಿಷಯವೇ ಕಂದಾ ! ಪಾಂಡವರಿಗೂ, ಕೌರವರಿಗೂ ಬಿಲ್ವಿದ್ಯೆ ಕಲಿಸಿದ ದ್ರೋಣಾಚಾರ್ಯರು ರಚಿಸಿದ ಚಕ್ರವ್ಯೂಹವನ್ನು ಭೇದಿಸುವುದು ಅಷ್ಟು ಸುಲಭದ ಕೆಲಸವೇ ?

ಪ್ರಶ್ನೆಗಳು :

ಅ) ಚಕ್ರವ್ಯೂಹವನ್ನು ರಚಿಸಿದವರು ಯಾರು ?

ಆ) ಕೌರವರು – ಪಾಂಡವರು ಯಾರಿಂದ ಬಿಲ್ವಿದ್ಯೆ ಕಲಿತರು ?

ಇ) ಅಭಿಮನ್ಯುವಿನ ತಂದೆಯ ಹೆಸರೇನು ?

ಈ) ಚಕ್ರವ್ಯೂಹವನ್ನು ಭೇದಿಸುವ ವಿದ್ಯೆ ಯಾರ್‍ಯಾರಿಗೆ ಗೊತ್ತು ?

II. ವ್ಯಕ್ತೀಕರಣ – ಸೃಜನಾತ್ಮಕತೆ (18 ಅಂಕಗಳು) $2 \times 2 = 4$

ಅ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :

5. ವಿವೇಕಾನಂದರು ಮೊದಲನೆ ಆದ್ಯತೆಯನ್ನು ಯಾವುದಕ್ಕೆ ನೀಡಬೇಕೆಂದಿದ್ದಾರೆ ?

6. ಯಾರಿಗೆ ವಸಂತ ಮುಖ ತೋರಲಿಲ್ಲ ?

ಆ) ಇದಕ್ಕೆ 10–12 ವಾಕ್ಯಗಳಲ್ಲಿ ಉತ್ತರಿಸಿ : **1 × 4 = 4**

7. ಮೃಗ ಮತ್ತು ಸುಂದರಿ ಕತೆಯನ್ನು ಸಂಕ್ಷಿಪ್ತವಾಗಿ ನಿಮ್ಮ ಮಾತುಗಳಲ್ಲಿ ಬರೆಯಿರಿ.

(ಅಥವಾ)

ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಹನ್ನೆರಡು ವರ್ಷದ ಬಾಲಕ ಭಗತಸಿಂಗ್‌ನ ಮೇಲೆ ಯಾವ ಪ್ರಭಾವ ಬೀರಿದೆ ಎಂಬುದನ್ನು ವಿವರಿಸಿ.

ಇ) ಇವಕ್ಕೆ 10–12 ವಾಕ್ಯಗಳಲ್ಲಿ ಉತ್ತರಿಸಿ : **2 × 5 = 10**

8. ಅಕ್ಕನ ಮದುವೆಗಾಗಿ ಮೂರು ದಿನಗಳ ರಜೆಯನ್ನು ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ರಜೆಪತ್ರ ಬರೆಯಿರಿ.

(ಅಥವಾ)

ಪರಿಸರ ಮಾಲಿನ್ಯವನ್ನು ಕುರಿತು ಒಂದು ಚಿಕ್ಕ ಪ್ರಬಂಧ ಬರೆಯಿರಿ.

9. ನಿಮ್ಮ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ವರದಿಯನ್ನು ರಚಿಸಿ.

(ಅಥವಾ)

'ಇಬ್ಬರ ಜಗಳ ಮೂರನೆಯವನಿಗೆ ಲಾಭ' ಈ ಗಾದೆಯನ್ನು ವಿಸ್ತರಿಸಿ ಬರೆಯಿರಿ.

This Question Paper contains 4 Printed Pages.

02K(B)

KANNADA, Paper - II

(First Language)

Parts A and B

Time : 2 Hrs. 45 min.] **[Maximum Marks : 40**

ಸೂಚನೆ ಗಳು :

1. ಕೊಟ್ಟ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆವರಣದಲ್ಲಿ ಗುರ್ತಿಸಿ.
2. **Part-B** ಗೆ ಸಂಬಂಧಿಸಿದ ಉತ್ತರಗಳನ್ನು ಈ ಪ್ರಶ್ನೆಪತ್ರಿಕೆಯಲ್ಲಿಯೇ ಬರೆದು **Part-A** ಉತ್ತರ ಪತ್ರಿಕೆಗೆ ಲಗತ್ತಿಸಬೇಕು.

Part-B

Time : 30 minutes ***Marks : 10***

III. ಭಾಷಾಂಶಗಳು

ಈ ಕೆಳಗಿನ ಪ್ರಶ್ನೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿ ಆವರಣದಲ್ಲಿ ಆ ಉತ್ತರವನ್ನು ಸೂಚಿಸುವ ಅಕ್ಷರವನ್ನು ಬರೆಯಿರಿ. **$20 \times \frac{1}{2} = 10$**

1. 'ಹುಸಿಯದ ಬೇಹಾರಿಯೇ ಇಲ್ಲ' –
ಈ ವಾಕ್ಯವನ್ನು ಹೊಸಗನ್ನಡದಲ್ಲಿ ಬರೆಯಿರಿ [ ]
(A) ಸುಳ್ಳು ಹೇಳದಿರುವ ವ್ಯಾಪಾರಿಯೇ ಇಲ್ಲ
(B) ಸತ್ಯವನ್ನು ಹೇಳುವ ವ್ಯಾಪಾರಿಗಳೇ ಹೆಚ್ಚು.
(C) ಸತ್ಯವನ್ನು ಬಿಡದ ವ್ಯಾಪಾರಗಳೇ ಕಡಿಮೆ.
(D) ಸುಳ್ಳು ಹೇಳುವ ವ್ಯಾಪಾರಿಗಳು ಇಲ್ಲ

2. 'ಪಾಂಡವರೊಳಿಱಿದು ಛಲಮನೆ ಮೆರೆವೆಂ '–
ಈ ವಾಕ್ಯವನ್ನು ಹೊಸಗನ್ನಡದಲ್ಲಿ ಬರೆಯಿರಿ [ ]
(A) ಪಾಂಡವರೊಡನೆ ಯುದ್ಧಮಾಡಿ ಛಲವನ್ನೆ ಮೆರೆಯುವೆನು.
(B) ಪಾಂಡವರ ಜೊತೆ ಸೇರಿ ಯುದ್ಧ ಮಾಡುವೆನೆಂದನು.
(C) ಪಾಂಡವರ ಜೊತೆ ಯುದ್ಧ ಮಾಡಿ ಗೆಲ್ಲುತ್ತೇನೆ.
(D) ಕೌರವರು ಪಾಂಡವರು ಛಲದಿಂದ ಇರುತ್ತೇವೆ.

3. ಹುಡುಗನು ಪಾಠವನ್ನು ಓದುತ್ತಾನೆ - ಇದಕ್ಕೆ ಕರ್ಮಣಿ ವಾಕ್ಯ ಗುರ್ತಿಸಿ. [ ]

(A) ಹುಡುಗನು ಪಾಠವನ್ನು ಓದುವುದಿಲ್ಲ

(B) ಪಾಠದಿಂದ ಹುಡುಗರು ಓದುತ್ತಾರೆ.

(C) ಪಾಠವು ಹುಡುಗನಿಂದ ಓದಲ್ಪಡುತ್ತದೆ.

(D) ಪಾಠವು ಹುಡುಗನಿಂದ ಬರೆಯಲ್ಪಡುತ್ತದೆ.

4. ಭೀಮನಿಂದ ಅನ್ನವು ಉಣ್ಣಲ್ಪಟ್ಟಿತು - ಇದಕ್ಕೆ ಕರ್ತರಿ ವಾಕ್ಯ ಗುರ್ತಿಸಿ. [ ]

(A) ಭೀಮನು ಅನ್ನವನ್ನು ಉಂಡನು.

(B) ಭೀಮನಿಂದ ಅನ್ನವನ್ನು ಉಂಡನು.

(C) ಭೀಮ ಅನ್ನ ಉಣ್ಣಲ್ಪಟ್ಟನು.

(D) ಭೀಮನೇ ಅನ್ನದಿಂದ ಉಂಡನು.

5. ಬಡವರಿಗೆ ದಾನ ಮಾಡಬೇಕು - ಇದಕ್ಕೆ ವಿರುದ್ಧಾರ್ಥಕ ವಾಕ್ಯ ಗುರ್ತಿಸಿ. [ ]

(A) ಬಡವರಿಗೆ ದಾನ ಮಾಡಲೇಬೇಕು.

(B) ಬಡವರಿಗೆ ದಾನ ಮಾಡಬಾರದು.

(C) ಬಡವರಿಗೆ ಸ್ವಲ್ಪ ದಾನ ಮಾಡಬೇಕು.

(D) ಬಡವರಿಗೆ ದಾನ ಮಾತ್ರ ಮಾಡಬೇಕು.

6. 'ಎಲ್ಲರು ವಿದ್ಯೆ ಕಲಿಯಿರಿ' ಎಂದು ಸರ್ಕಾರ ಹೇಳುತ್ತಿದೆ -
ಇದರ ಪರೋಕ್ಷ ವಾಕ್ಯ ಗುರ್ತಿಸಿ. [ ]

(A) ವಿದ್ಯೆ ಕಲಿಯಿರೆಂದು ಹೇಳುತ್ತಿದೆ ಸರ್ಕಾರ.

(B) ಸರ್ಕಾರದಿಂದ ವಿದ್ಯೆ ಕಲಿಯಬೇಕೆಂದು ಆದೇಶಿಸಿದೆ.

(C) ವಿದ್ಯೆ ಕಲಿಯಬೇಕೆಂದು ಸರ್ಕಾರ ಹೇಳುತ್ತಿದೆ.

(D) ಎಲ್ಲರು ವಿದ್ಯೆ ಕಲಿಯಿರೆಂದು ಸರ್ಕಾರ ಹೇಳುತ್ತಿದೆ.

7. ತನಗೆ ಬಹಳ ಮುಖ್ಯವಾದ ಕೆಲಸವಿದೆಯೆಂದು ರಾಮು ಹೇಳಿದನು -
ಇದರಪ್ರತ್ಯಕ್ಷವಾಕ್ಯ ಗುರ್ತಿಸಿ. [ ]

(A) ಅವನಿಗೆ ಮುಖ್ಯವಾದ ಕೆಲಸವಿದೆಯೆಂದು ರಾಮು ಹೇಳಿದನು.

(B) "ನನಗೆ ಬಹಳ ಮುಖ್ಯವಾದ ಕೆಲಸವಿದೆ" ಎಂದು ರಾಮು ಹೇಳಿದನು.

(C) ಮುಖ್ಯವಾದ ಕೆಲಸ ನಾನು ಮಾಡುತ್ತೇನೆ ಎಂದು ರಾಮು ಹೇಳಿದನು.

(D) "ನಾನು ಮುಖ್ಯವಾದ ಕೆಲಸದಲ್ಲಿದ್ದೇನೆ" ಎಂದು ರಾಮು ಹೇಳಿದನು.

8. 'ಅವನು ಮರದ ತುತ್ತತುದಿಗೆ ಏರಿದನು' – ಈ ವಾಕ್ಯದಲ್ಲಿರುವ ದ್ವಿರುಕ್ತಿ ಗುರ್ತಿಸಿ [ ]

(A) ಅವನು (B) ಮರದ

(C) ತುತ್ತತುದಿಗೆ (D) ಏರಿದನು

9. ಹುಡುಗರು ಕಷ್ಟಪಟ್ಟು ಓದುತ್ತಾರೆ –

ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಬದಲಾಯಿಸಿ. [ ]

(A) ಹುಡುಗರು ಕಷ್ಟಪಟ್ಟು ಓದುವರು.

(B) ಹುಡುಗರು ಕಷ್ಟಪಟ್ಟು ಓದಿದ್ದಾರೆ.

(C) ಹುಡುಗರು ಕಷ್ಟಪಟ್ಟು ಓದಲ್ಲ

(D) ಹುಡುಗರು ಕಷ್ಟಪಟ್ಟು ಓದುವರೇ.

10. ಅಯ್ಯೋ ! ಎಷ್ಟು ದೊಡ್ಡ ಹಾವು ! ಈ ವಾಕ್ಯದಲ್ಲಿರುವ ಚಿಹ್ನೆ. [ ]

(A) ಪ್ರಶ್ನಾರ್ಥಕ (B) ಭಾವಸೂಚಕ

(C) ಅರ್ಧವಿರಾಮ (D) ಉದ್ಧರಣ

11. ಹುಡುಗರು ಶಾಲೆಗೆ ಹೋದರು. ಇದು ಎಂತಹ ವಾಕ್ಯ. [ ]

(A) ಮಿಶ್ರ (B) ಸಂಯೋಜಿತ

(C) ಸಾಮಾನ್ಯ (D) ಕರ್ಮಣಿ

12. ಸಂಯೋಜಿತ ವಾಕ್ಯಕ್ಕೆ ಉದಾಹರಣೆ ಗುರ್ತಿಸಿ. [ ]

(A) ಹೆಚ್ಚು ಮಳೆ ಸುರಿಯಿತು ; ಆದರೆ ಕುಡಿಯಲು ನೀರೇ ಇಲ್ಲ

(B) ವಿದ್ಯಾರ್ಥಿಗಳು ಪದ್ಯವನ್ನು ಹಾಡಿದರು.

(C) ಅನಿತಾಳಿಗೆ ಮದುವೆ ನಿಶ್ಚಯವಾಯಿತೆಂದು ಅವಳ ತಂದೆಯಿಂದ ಗೊತ್ತಾಯಿತು.

(D) ಹುಡುಗರು ಶಾಲೆಯಲ್ಲಿ ಚೆನ್ನಾಗಿ ಓದುತ್ತಾರೆ.

13. ''ದೇವರು ಅವನಿಗೆ ಒಳ್ಳೆಯದನ್ನು ಮಾಡಲಿ.'' – ಇದು ಎಂತಹ ವಾಕ್ಯ ಗುರ್ತಿಸಿ. [ ]

(A) ಪ್ರಶ್ನಾರ್ಥಕ (B) ವಿಧ್ಯರ್ಥಕ

(C) ವಿವರಣಾತ್ಮಕ (D) ನಿಷೇಧಾರ್ಥಕ

14. ''ಚೆಂಡು ಮೇಲಕ್ಕೆ ಹೋದೀತು.'' – ಇದು ಎಂತಹ ವಾಕ್ಯ ಗುರ್ತಿಸಿ. [ ]

(A) ನಿಷೇಧಾರ್ಥಕ (B) ವಿಧ್ಯರ್ಥಕ

(C) ಸಂಭಾವನಾರ್ಥಕ (D) ಕರ್ಮ

✶ ಈ ಕೆಳಗಿನ ನುಡಿಗಟ್ಟುಗಳ ಅರ್ಥ ಬರೆಯಿರಿ.

15. ನಡು ನೀರಲ್ಲಿ ಕೈಬಿಡು : ....

16. ನೀರಿಗೆ ಹಾಕು : ....

17. ತಲೆಬಾಗು : ....

✶ ಈ ಕೆಳಗಿನ ಪದಗಳನ್ನು ಸ್ವಂತವಾಕ್ಯದಲ್ಲಿ ಬರೆಯಿರಿ.

18. ದಂಗುಬಡಿ : ....

....

19. ಕಕ್ಕಾಬಿಕ್ಕಿ : ....

....

20. ಒಳಗಿಂದೊಳಗೆ : ....

....